No. of Printed Pages : **6**

# 8003

*Register Number* | | | | | | |

# Language – Part IV – KANNADA

(Poetry, Prose and Grammar)

Time Allowed : 2½ Hours ] [ Maximum Marks : 100

**ಸೂಚನೆಗಳು :** (1) ಪ್ರಶ್ನೆಪತ್ರಿಕೆ ಮುದ್ರಣ ಸ್ವಚ್ಛವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ವಚ್ಛತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ.

(2) ಉತ್ತರ ಬರೆಯಲು ಮತ್ತು ಅಡ್ಡಗೆರೆ ಎಳೆಯಲು **ನೀಲಿ** ಅಥವಾ **ಕಪ್ಪು** ಶಾಹಿಯನ್ನು ಬಳಸಿರಿ.

(3) ಉತ್ತರಗಳು ಸ್ಪಷ್ಟವಾಗಿದ್ದು, ಕೊಟ್ಟಿರುವ ಸಾಲುಗಳ ಮಿತಿಯನ್ನು ಮೀರದಂತಿರಬೇಕು.

## ಭಾಗ – ಅ
## PART - A

**I.** **(a)** ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : **11x1=11**
Answer the following questions by choosing the suitable answer :

**1.** 'ಸಂಸಾರ ಸಾರೋದಯ' – ಎಂಬ ಬಿರುದನ್ನು ಪಡೆದ ಕವಿ :
(ಅ) ಪೊನ್ನ (ಆ) ರನ್ನ
(ಇ) ಪಂಪ (ಈ) ಜನ್ನ

**2.** ಬಸವಣ್ಣನ ವಚನಗಳ ಅಂಕಿತ ನಾಮ __________.
(ಅ) ಕೂಡಲ ಸಂಗಮದೇವ (ಆ) ಚೆನ್ನಮಲ್ಲಿಕಾರ್ಜುನ
(ಇ) ರಾಮನಾಥ (ಈ) ಗುಹೇಶ್ವರ

**3.** ಕಳ್ಳರ ಗುರುವಿನ ಹೆಸರು __________.
(ಅ) ಚೋಮ ನಾಯಕ (ಆ) ರಾಮ ನಾಯಕ
(ಇ) ಕೃಷ್ಣ ನಾಯಕ (ಈ) ಭೀಮ ನಾಯಕ

**4.** ಚಿಪ್ಕೋ ಚಳುವಳಿಯ ಹಿನ್ನೆಲೆಯಲ್ಲಿರುವ ನಾಯಕ __________.
(ಅ) ರಾಮಲಾಲ್ ಬಹುಗುಣ (ಆ) ಲಕ್ಷ್ಮಣಲಾಲ್ ಬಹುಗುಣ
(ಇ) ರೋಹಿತ್‌ಲಾಲ್ ಬಹುಗುಣ (ಈ) ಸುಂದರಲಾಲ್ ಬಹುಗುಣ

**5.** ಪಂ. ಭೀಮಸೇನ್ ಜೋಶಿ __________.
(ಅ) ಕರ್ನಾಟಕ ರತ್ನ (ಆ) ತಮಿಳು ರತ್ನ
(ಇ) ಕೇರಳ ರತ್ನ (ಈ) ಆಂಧ್ರ ರತ್ನ

(b) ಬಿಟ್ಟ ಸ್ಥಳ ತುಂಬಿರಿ :

Fill in the blanks :

6. ಎನ್ನ ಕಾಲೇ ಕಂಭ, __________ ದೇಗುಲ.

7. ಕನ್ನಡವನುಳಿದೆನಗೆ __________ ಜೀವನವಿಲ್ಲ.

(c) ಹೊಂದಿಸಿ ಬರೆಯಿರಿ :

Match the following :

| | | |
|---|---|---|
| 8. ತಬ್ಬಲಿ ರಾಯ | – | ಬೆಟಗೇರಿ ಕೃಷ್ಣಶರ್ಮ |
| 9. ಕಳ್ಳರ ಗುರು | – | ಎಂ. ಗೋವಿಂದ ಪೈ |
| 10. ಪಿಡಿಯಿಪ್ಪಂ ಕರಚಕ್ರಮಂ | – | ಜನಪದ ಕತೆ |
| 11. ಗೊಲ್ಗೊಥಾ | – | ಪಂಪ |

## ಭಾಗ – ಆ

## PART - B

II. (a) ಕೊಟ್ಟಿರುವ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಮಾತ್ರ ಸಂಕ್ಷಿಪ್ತವಾಗಿ ಉತ್ತರಿಸಿರಿ : 4x2=8

From the following questions answer **any four** questions briefly :

12. ಭೀಷ್ಮನಿಗೆ ವೀರ ಪಟ್ಟವನ್ನು ಕಟ್ಟಿದಾಗ ಕರ್ಣನು ಹೇಳುವ ಮಾತುಗಳೇನು ?

13. ತೆರಣಿಯ ಹುಳು ಹೇಗೆ ತನ್ನ ಸಾವಿಗೆ ತಾನೇ ಕಾರಣವಾಗುತ್ತದೆ ?

14. ಬಕಾಸುರನು ಭೀಮನನ್ನು ಕಂಡು ಕೋಪಗೊಳ್ಳಲು ಕಾರಣವೇನು ?

15. ವಿದ್ಯೆ ಇಲ್ಲದವನ ಮುಖ ಹೇಗಿರುತ್ತದೆ ?

16. ಸಿಲುಬೆಗೇರಿದ ಯೇಸುವಿನ ಮಾತುಗಳಿಗೆ ಅಲ್ಲಿ ನೆರೆದವರ ಪ್ರತಿಕ್ರಿಯೆ ಏನು ?

17. ಕವಿಗೆ ಮನುಷ್ಯರನ್ನು ಪ್ರೀತಿಸಲು ಏಕೆ ಕಷ್ಟವಾಗುತ್ತದೆ ?

(b) ಈ ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಮಾತ್ರ ಸಂಕ್ಷಿಪ್ತವಾಗಿ ಉತ್ತರಿಸಿರಿ : 4x2=8

From the following questions answer **any four** questions briefly :

**18.** ಕೃಷ್ಣಪಕ್ಷದ ಚತುರ್ದಶಿಯ ರಾತ್ರಿಯ ವಾತಾವರಣ ಹೇಗಿದ್ದಿತು ?

**19.** ಕಂಟ್ರಾಕ್ಟರ್ ಮರ ಕಡಿಯಲು ಬಂದಾಗ ಹಳ್ಳಿಯವರು ಏನು ಮಾಡಿದರು ?

**20.** ಜೋಶಿಯವರಿಗೆ ದೊರೆತ ಪುರಸ್ಕಾರಗಳು ಯಾವುವು ?

**21.** ನವರಸಗಳು ಯಾವುವು ? ಹೆಸರುಗಳನ್ನು ಬರೆಯಿರಿ.

**22.** ಹೊತ್ತಾದಂತೆಲ್ಲಾ ವಿದ್ಯಾರ್ಥಿಗಳ ಬರವಣಿಗೆಯ ವೇಗ ಹೇಗಿರುತ್ತದೆ ?

**23.** ಗುರುತಾಯಮ್ಮನು ಏನೇನು ಅಪಶಕುನಗಳನ್ನು ಕಂಡಳು ?

(c) ಈ ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಮಾತ್ರ ಉತ್ತರಿಸಿರಿ : 4x2=8

From the following questions answer **any four** questions briefly :

**24.** ಹೃದಯಗಳ ಭಾಷೆಯೇ ಬೇರೆ ಎಂಬುದರ ಅರ್ಥವೇನು ?

**25.** ನಮ್ಮ ದೇಶದ ಪ್ರಪ್ರಥಮ ಸಮಸ್ಯೆ ಯಾವುದು ?

**26.** ಅನ್ನ ಸಮಸ್ಯೆಯ ಮೂಲ ಶಕ್ತಿಗಳಾವುವು ?

**27.** ಉಪಗ್ರಹಗಳ ಮೂಲಕ ಚಂಡಮಾರುತಗಳನ್ನು ಹೇಗೆ ಪತ್ತೆ ಹಚ್ಚಲಾಗುತ್ತದೆ ?

**28.** ಚಂಡಮಾರುತ ಯಾವಾಗ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ ?

**29.** ಸಾಹೇಬರ ಕೈಯಲ್ಲಿದ್ದ ಪುಸ್ತಕ ಯಾವುದು ?

(d) ಕೊಟ್ಟಿರುವ ಪ್ರಶ್ನೆಗಳಲ್ಲಿ **2** ಕ್ಕೆ ಮಾತ್ರ ವಿವರವಾಗಿ ಉತ್ತರಿಸಿರಿ : **2x5=10**

From the following questions answer **any two** questions in detail :

**30.** ಕರ್ಣ–ದ್ರೋಣರ ವಾಗ್ವಾದವನ್ನು ವಿವರಿಸಿರಿ.

**31.** ಬಕಾಸುರನಿಗೆ ಊಟದ ಬಂಡಿಯನ್ನು ಕೊಂಡೊಯ್ದವರು ಯಾರು ? ಯಾಕೆ ವಿವರಿಸಿರಿ.

**32.** ಎದೆಯ ದನಿ ಧರ್ಮನಿಧಿ! ಕರ್ತವ್ಯವದುವೆ ವಿಧಿ ಎಂಬುದರ ಅಂತರಾರ್ಥವೇನು ?

**33.** 'ನಾನು ಪ್ರೀತಿಸುತ್ತೇನೆ' ಕವನದ ಆಶಯವನ್ನು ನಿಮ್ಮ ಮಾತಿನಲ್ಲಿ ವಿಶದಪಡಿಸಿರಿ.

(e) ಕೊಟ್ಟಿರುವ ಪ್ರಶ್ನೆಗಳಲ್ಲಿ **2** ಕ್ಕೆ ಮಾತ್ರ ವಿವರವಾಗಿ ಉತ್ತರಿಸಿರಿ : **2x5=10**

From the following questions answer **any two** questions in detail :

**34.** ಚಿಪ್ಕೋ ಚಳುವಳಿಯ ಹಿನ್ನೆಲೆಯನ್ನು ವಿವರಿಸಿರಿ.

**35.** ಭೀಮಸೇನ ಜೋಶಿಯವರು ಸಂಗೀತವನ್ನು ಕಲಿತದ್ದು ಹೇಗೆ ? ವಿವರಿಸಿರಿ.

**36.** ಅಧ್ಯಾಪಕರಿಗೆ ಮಾತು ಉಸಿರಿನಂತೆಯೇ ಸಹಜವಾದ ಕ್ರಿಯೆ – ಸಮರ್ಥಿಸಿ.

**37.** ಕಣ್ವರು ತಮ್ಮ ಸಾಕುಮಗಳಾದ ಶಕುಂತಲೆ ಪತೀಗೃಹದಲ್ಲಿ ಹೇಗಿರಬೇಕೆಂದು ಬುದ್ಧಿವಾದ ಹೇಳಿದರು ?

(f) ಕೊಟ್ಟಿರುವ ಪದ್ಯಗಳಲ್ಲಿ **ಯಾವುದಾದರೊಂದನ್ನು** ಪೂರ್ಣ ಗೊಳಿಸಿರಿ : **1x5=5**

Complete **any one** of the following parts of the poems :

**38.** (ಅ) ಲೋಕದ ಡೊಂಕ ....................

.............................................

.............................................

.............................................

ಕೂಡಲ ಸಂಗಮ ದೇವಾ.

**ಅಥವಾ**

(ಆ) ಕನ್ನಡದ ಸವಿಮಾತು, ...............

.............................................

.............................................

................. ಎನಗೆ ನರುಗಂಪು.

## ಭಾಗ – ಇ
## PART - C

III. (a) ಕೊಟ್ಟಿರುವ **ಎಲ್ಲಾ** ಪ್ರಶ್ನೆಗಳಿಗೂ ಉತ್ತರಿಸಿರಿ : **12x1=12**

Answer **all** the questions given below :

39. 'ಜಲಜ' – ಈ ಪದದ ಲಿಂಗವನ್ನು ಹೆಸರಿಸಿ.

40. 'ಮುಕ್ಕಣ್ಣು' – ಈ ಪದವನ್ನು ಬಿಡಿಸಿ ಬರೆಯಿರಿ.

41. 'ರಾಯ' – ಈ ಪದದ ತತ್ಸಮ ರೂಪ ಬರೆಯಿರಿ.

42. 'ಪರೋಪಕಾರ' – ಈ ಪದವನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.

43. '<u>ರಾಜನಿಗೆ</u> ಬಹುಮಾನ ದೊರಕಿತು' – ಈ ವಾಕ್ಯದಲ್ಲಿನ ಗೆರೆ ಎಳೆದ ಪದದ ವಿಭಕ್ತಿಯನ್ನು ಹೆಸರಿಸಿರಿ.

44. 'ರಂಗನು ಪೇಟೆಗೆ ಹೋದನು' – ಈ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿರಿ.

45. ಅಂಗಳವನ್ನು ರಂಗೋಲಿಯನ್ನು ಹಾಕಿದಳು ಗೀತಳು ಗುಡಿಸಿ – ಈ ವಾಕ್ಯವನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಬರೆಯಿರಿ.

46. ಜಾನ್ ಶಾಲೆಗೆ ಹೋಗುವನು – ಈ ವಾಕ್ಯವನ್ನು ಭೂತ ಕಾಲಕ್ಕೆ ಪರಿವರ್ತಿಸಿ.

47. ಪಕ್ಷಿಯು ಬೆಳಗ್ಗೆ ರಾಗವಾಗಿ ಹಾಡಿದಳು – ಈ ವಾಕ್ಯದಲ್ಲಿನ ತಪ್ಪನ್ನು ಸರಿಪಡಿಸಿ ಬರೆಯಿರಿ.

48. 'ಗಾಂಗೇಯ' – ಈ ಹೆಸರು ಯಾರಿಗಿದೆ ?

49. ಷಟ್ಪದಿಯಲ್ಲಿನ ಸಾಲುಗಳ ಸಂಖ್ಯೆ ಎಷ್ಟು ?

50. ಆಹಾ ಐಶ್ವರ್ಯಳ ಜಡೆ ಎಷ್ಟು ಉದ್ದ – ಈ ವಾಕ್ಯಕ್ಕೆ ಲೇಖನ ಚಿಹ್ನೆಗಳನ್ನು ಹಾಕಿರಿ.

(b) ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 4 ಕ್ಕೆ** ಮಾತ್ರ ಉತ್ತರಿಸಿರಿ : **4x2=8**

Answer **any four** questions from the following :

51. ಸಂಧಿ ಎಂದರೇನು ? ಕನ್ನಡ ಸಂಧಿಗಳನ್ನು ಹೆಸರಿಸಿರಿ.

52. ಕುಲಜರನುದ್ಧತರಂ ಭುಜ – ಈ ಸಾಲಿಗೆ ಪ್ರಸ್ತಾರ ಹಾಕಿರಿ.

53. ಪಾಂಡುಪುತ್ರ, ಪ್ರಶ್ನೆಪತ್ರಿಕೆ – ಈ ಪದಗಳನ್ನು ಬಿಡಿಸಿ ಬರೆದು ಸಮಾಸವನ್ನು ಹೆಸರಿಸಿರಿ.

54. ರೂಪಕ ಅಲಂಕಾರದ ಲಕ್ಷಣ ಬರೆದು ಉದಾಹರಣೆ ತಿಳಿಸಿರಿ.

55. ಚಿಲ್ಡ್ರನ್ಸ್ ಡೇ ಪ್ರೋಗ್ರಾಂ ಚೆನ್ನಾಗಿತ್ತು – ಈ ವಾಕ್ಯದ ಅನ್ಯಭಾಷಾ ಪದಗಳಿಗೆ ಕನ್ನಡ ಪದಗಳನ್ನು ಬರೆಯಿರಿ.

56. ಕಂದ ಪದ್ಯದ ಲಕ್ಷಣ ಬರೆಯಿರಿ.

[ Turn over

## ಭಾಗ – ಈ
## PART - D

IV. 57. ಕೊಟ್ಟಿರುವ ವಿಷಯವನ್ನು ಕುರಿತು ಕಿರು ಪ್ರಬಂಧ ಬರೆಯಿರಿ (**ಒಂದಕ್ಕೆ ಮಾತ್ರ**) : **1x5=5**
Write a short essay on **any one** of the following :
(ಅ) ಅರಣ್ಯ ಸಂಪತ್ತು (ಆ) ಕಂಪ್ಯೂಟರ್

58. ನಿಮ್ಮ ಊರಿನಲ್ಲಿ ನಡೆದ ಜಾತ್ರೆಯನ್ನು ವರ್ಣಿಸಿ ಗೆಳೆಯನಿಗೊಂದು ಪತ್ರ ಬರೆಯಿರಿ. **1x5=5**

**ಅಥವಾ**

ನಿಮ್ಮ ಬೀದಿಯಲ್ಲಿ ಸೇರಿರುವ ಕೊಳಚೆಗಳನ್ನು ಸ್ವಚ್ಛಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗೆ ಅರ್ಜಿಯೊಂದನ್ನು ಬರೆಯಿರಿ.

59. ಈ ಕೆಳಗಿನ ಗದ್ಯಭಾಗವನ್ನು ಓದಿ, ನೀಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ : **5x1=5**
Read the following passage and answer the given questions :

ಅಂಬಿಕಾತನಯದತ್ತ ಎಂಬುದು ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಕಾವ್ಯನಾಮ. ಇವರು 31.1.1896 ರಲ್ಲಿ ಧಾರವಾಡದಲ್ಲಿ ಜನಿಸಿದರು. ಧಾರವಾಡದ ಗೆಳೆಯರ ಬಳಗದಲ್ಲಿ ಇವರ ಒಡನಾಟ. ಗರಿ, ನಾದಲೀಲೆ, ಸಖೀಗೀತ, ಉಯ್ಯಾಲೆ ಇವು ಇವರ ಪ್ರಸಿದ್ಧ ಕವನ ಸಂಕಲನಗಳು. ಕಾಳಿದಾಸನ 'ಮೇಘದೂತ' ವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರ 'ನಾಕು ತಂತಿ' ಎಂಬ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಬೇಂದ್ರೆಯವರು 26.10.1991 ರಂದು ನಿಧನರಾದರು.

**ಪ್ರಶ್ನೆಗಳು :**

(1) ಬೇಂದ್ರೆಯವರ ಕಾವ್ಯನಾಮವೇನು ?

(2) ಬೇಂದ್ರೆಯವರು ಎಲ್ಲಿ ಜನಿಸಿದರು ?

(3) ಬೇಂದ್ರೆಯವರ ಪ್ರಮುಖ ಕವನ ಸಂಕಲನಗಳು ಯಾವುವು ?

(4) ಕಾಳಿದಾಸನ ಯಾವ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ ?

(5) ನಾಕುತಂತಿಗೆ ಯಾವ ಪ್ರಶಸ್ತಿ ದೊರಕಿದೆ ?

60. (a) ಆಂಗ್ಲ ಗದ್ಯ ಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿರಿ : **3**
Translate the English passage into Kannada language.

Every year on 26th January, the people celebrate the Republic Day of India. It was on 26th January 1950 that India was declared a Republic. It is a public holiday for our country.

(b) ಈ ಕೆಳಗಿನ ಆಂಗ್ಲ ಗಾದೆಗಳಿಗೆ ಸರಿಯಾದ ಕನ್ನಡ ಗಾದೆಗಳನ್ನು ಬರೆಯಿರಿ : **2**
Write suitable proverbs in Kannada to the given English proverbs.
(1) Health is wealth.
(2) Too much is too bad.

- o O o -